**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹರಿಹರ**

**ಸಿ.ಸಿ. ನಂ.856/2018**

| | | |
|---|---|---|
| ಹೆಸರು | **ಜಮಾಲ್ಲೂನ್** | ಪಿಡಬ್ಲ್ಯೂ 01 |
| ಗಂಡನ /ತಂದೆಯ ಹೆಸರು | **ಹುಸೇನ್ ಸಾಬ್** | ಸಿಡಬ್ಲ್ಯೂ 02 |
| ವಯಸ್ಸು | 45 ವರ್ಷಗಳು | |
| ಉದ್ಯೋಗ | ಆಟೋ ಚಾಲಕ | **ದಿಃ 06.08.2021** |
| ವಾಸ ಸ್ಥಳ | ರಾಜನಹಳ್ಳಿ ಗ್ರಾಮ | |
| ಮುಖ್ಯ ವಿಚಾರಣೆ | ಸಸಅ ರವರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಈಗ್ಗೆ 2 ವರ್ಷಗಳ ಹಿಂದೆ ನಾನು ಈ ನೋಡುತ್ತಿರುವ ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆ ಮಹಜರ್ ಅಗಿದ್ದು , ಮಹಜರ್ ನಲ್ಲಿ ಇರುವ ಸಾಕ್ಷಿ ಸಹಿ ಗುರುತಿಸಿದ್ದರಿಂದ, ಸದರಿ ಮಹಜರ್ ನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ.1 ಕ್ಕೆ ನಾನು ಪೊಲೀಸ್ ಠಾಣೆಯ ಸಹಿ ಮಾಡಿದ್ದೆ. ನಿಪಿ.1 ರಲ್ಲಿ ಎನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ, ನನ್ನ ಸಮಕ್ಷಮ ಪೊಲೀಸ್ ನವರು ಪಂಚನಾಮೆ ನಡೆಸಲಿಲ್ಲ. ಈಗ ನಾನು ನೋಡುತ್ತಿರುವ ನಕ್ಷಯಲ್ಲಿ ನನ್ನ ಸಹಿ ಇದೆ. ಸದರಿ ನಕ್ಷಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ.2 ನ್ನು ಎಲ್ಲಿ ತಯಾರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ಪೊಟೋದಲ್ಲಿ ನಾನು ಇದ್ದೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಪಿ.3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಪೊಟೋ ತೆಗೆದ ಜಾಗ ಗೊತ್ತಿಲ್ಲ. ಈಗ ನಾನು ನೋಡಿರುವ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ವಾಹನ ಪಂಚನಾಮೆಯಾಗಿದ್ದು , ಅದನ್ನು ನಿಪಿ.5 ಎಂದು , ಸಾಕ್ಷಿಯ ಸಹಿಯನ್ನು ನಿಪಿ.5(ಎ)ಎಂದು ಗುರುತಿಲಸಾಯಿತು. ಈಗ ನಾನು ನೋಡುತ್ತಿರುವ ಪೊಟೊದಲ್ಲಿ ನಾನು ಕಾಣಿಸುತ್ತಿದ್ದೇನೆ, ಸಾಕ್ಷಿ ನೋಡಿ ಗುರುಸಿದ್ದರಿಂದ ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ಅದನ್ನು ಹರಿಹರ ಗ್ರಾಮಾಂತ ಪೊಲೀಸ್ ಠಾಣೆಯಲ್ಲಿ ತೆಗೆಯಲಾಗಿದೆ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಮಾನ್ಯ ಎಪಿಪಿ ರವರಿಂದಃ**

ದಿಃ24.05.2018 ರಂದು ನನ್ನನ್ನು ಪೊಲೀಸ್ ನವರು ಠಾಣೆಗೆ ಕರೆಯಿಸಿ , ಈ ಪ್ರಕರಣದ ವಿಚಾರವನ್ನು ನನಗೆ ತಿಳಿಪಡಿಸಿ , ವಿಚಾರಣೆಗೆ ಸಹಕರಿಸಬೇಕು ಮತ್ತು ಅಪಘಾತಕ್ಕೆ ಒಳಗಾದ ಒಂದು ವಾಹನವನ್ನು ವಶಪಡಿಸಿಕೊಳ್ಳಲು ಪಂಚರಾಗಲು ನನಗೆಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಹನಗವಾಡಿ ಗ್ರಾಮದ ಹತ್ತಿರ ರಾಯಲ್ ಗಾರ್ಡನ್ ಮುಂಭಾಗ ಬೆಂಗಳೂರು ಕಡೆಯಿಂದ ಪುನ ಕಡೆಗೆ ಹಾದು ಹೋಗುವ ರಸ್ತೆಯ ಬಳಿ ನನ್ನ ಸಮಕ್ಷಮ ಪೊಲೀಸ್ ನವರು ನಿಪಿ.1, 2 , 3 .4 ಮತ್ತು 5 ದಾಖಲೆಗಳನ್ನು ತಯಾರಿಸಿ , ಅಪಘಾತಕ್ಕೆ ಹಿಡಾದ ವಾಹನ ಲಾರಿ ನಂಃ ಕೆಎ 07 ಎ 9239 ನೇ ಪಾರ್ಕಿಂಗ್ ಇಲ್ಲದ ಜಾಗದಲ್ಲಿ ನಿಲ್ಲಿಸಿದ್ದು , ಸದರಿ ವಾಹನಕ್ಕೆ ಕೆಎ 03 ಎಂಟಿ 4765 ಕಾರ್ ಹಿಂಭಾಗಕ್ಕೆ ಡಿಕ್ಕಿಪಡಿಸಿ ಅಪಘಾತಕ್ಕೆ ಹಿಡಾದ ವಾಹನಗಳನ್ನು ಪೊಲೀಸ್ ನವರು ವಶಪಡಿಸಿಕೊಂಡು ಸ್ಥಳದಲ್ಲಿ ನಿಪಿ.2 ನ್ನು ತಯಾರಿಸಿದ್ದರು ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳವನ್ನು ನಾನು ಮತ್ತು ಇನ್ನೊಂಬ್ಬ ಪಂಚರಾದ ಧನುಷ್ ತೋರಿಸಿದಾಗ ಸದರಿ ಜಾಗವನ್ನು ಪೊಲೀಸ್ ನವರು ನಿಪಿ.3 ಮತ್ತು 4 ರಂತೆ ಪೊಟೋಗಳನ್ನು ಪಡೆದರು ಎಂದರೆ ಸರಿಯಲ್ಲ. ಅಪಘಾತಕ್ಕೆ ಹಿಡಾದ ಕಾರ್ ಅಂದರೆ ನಿಪಿ.6 ರಲ್ಲಿ ಕಾರ್ ನ್ನು ನನ್ನ ಸಮಕ್ಷಮ ವಶಪಡಿಸಿಕೊಂಡರು ಎಂದರೆಸರಿಯಲ್ಲ. ಪೊಲೀಸ್ ನವರು ನನ್ನ ಸಮಕ್ಷಮ ಮಹಜರ್ ಮಾಡಿ , ಮೇಲೆ ಹೇಳಿದ 2 ವಾಹನಗಳನ್ನು ವಶಪಸಿಡಿಕೊಂಡಿದ್ದರು ಸಹ ಆರೋಪಿಗೆ ಸಹಾಯ ಅಗಲು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,

**ಹರಿಹರ**